ಹೊನ್ನಾಳಿಯಲ್ಲಿ ಬಸ್ ನಿಲ್ದಾಣದ ನಿರ್ಮಾಣ.

1400 - ಡಾ. ಡಿ.ಬಿ. ಗಂಗಪ್ಪ (ಹೊನ್ನಾಳಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರವು ಹೊನ್ನಾಳಿಯಲ್ಲಿ ಬಸ್ ನಿಲ್ದಾಣ ಸ್ಥಾಪಿಸಲು ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಇದು ಯಾವ ಹಂತದಲ್ಲಿದೆ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಂದ ಪ್ರೌಢ ಶಾಲೆಗಳು ಮತ್ತು ಅನುದಾನ

1652 - ಶ್ರೀ ಹೆಚ್. ವಿಶ್ವನಾಥ (ಕೆ.ಆರ್. ನಗರ): ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಆಡಳಿತ ಮಂಡಳಿಯವರು ರಾಜ್ಯದಲ್ಲಿ ಎಷ್ಟು ಪ್ರೌಢಶಾಲೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ? ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿರುವ ಆಡಳಿತ ಮಂಡಳಿಯವರು ಪ್ರೌಢಶಾಲೆಗಳನ್ನು ಪ್ರಾರಂಭಿಸಿದ ನಂತರ ಯಾವ ವರ್ಷಕ್ಕೆ ಸರ್ಕಾರದ ಅನುದಾನ ಪಡೆಯಲು ಅರ್ಹತೆ ಹೊಂದುವರು.

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿರುವ ಪ್ರೌಢಶಾಲೆಗಳ ಆಡಳಿತ ಮಂಡಳಿಯವರು ಸರ್ಕಾರದ ಅನುದಾನ ಪಡೆಯಲು ಪಾಲಿಸಬೇಕಾದ ಷರತ್ತುಗಳು ಯಾವುವು?

ಈ) ಈ ಷರತ್ತುಗಳನ್ನು ಪಾಲಿಸದ ಆಡಳಿತ ಮಂಡಳಿಯ ಶಾಲೆಗಳಿಗೆ ಅನುದಾನ ನಿಲ್ಲಿಸಲಾಗುವುದೇ?

ಉ) ಹಾಗಿದ್ದಲ್ಲಿ ಇಂದಿನವರೆಗೂ ಎಷ್ಟು ಆಡಳಿತ ಮಂಡಳಿಗಳನ್ನು ಅನುದಾನನಕ್ಕೆ ಅನರ್ಹ ಮಾಡಲು ಉಪನಿರ್ದೇಶಕರು ಶಿಫಾರಸ್ಸು ಮಾಡಿರುವರು.

ಊ) ಹಿಂದುಳಿದ ವರ್ಗಗಳು ಪ್ರೌಢಶಾಲೆಗಳನ್ನು ಪ್ರಾರಂಭಿಸಿದ ಮೂರು ವರ್ಷಗಳ ನಂತರ ಸರ್ಕಾರದ ಅನುದಾನ ಪಡೆಯಲು ಆದೇಶ ಯಾವ ವರ್ಷ ಪ್ರಕಟಿಸಿದೆ. ಅದು ಜಾರಿಗೆ ಬಂದಿದೆಯೇ? ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇಮ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳಿಂದ ನಡೆಯುತ್ತಿರುವ ಒಟ್ಟು 512 ಖಾಸಗಿ ಪ್ರೌಢಶಾಲೆಗಳಿವೆ. ಜಿಲ್ಲಾವಾರು ವಿವರ ಕೆಳಕಂಡಂತಿವೆ.

1.	ಬೆಂಗಳೂರು ಉತ್ತರ	12
2.	ಬೆಂಗಳೂರು ದಕ್ಷಿಣ	07
3.	ಬೆಂಗಳೂರು ಗ್ರಾಮಾಂತರ	22
4.	ತುಮಕೂರು	102
5.	ಕೋಲಾರ	09

6. ಚಿತ್ರದುರ್ಗ	88
7. ಶಿವಮೊಗ್ಗ	28
8. ಬೆಳಗಾಂ	11
9. ಬಿಜಾಪುರ	49
10. ಧಾರವಾಡ	50
11. ಉತ್ತರ ಕನ್ನಡ	02
12. ಮೈಸೂರು	11
13. ಮಂಡ್ಯ	07
14. ಕೊಡಗು	ಇಲ್ಲ
15. ದಕ್ಷಿಣ ಕನ್ನಡ	04
16. ಚಿಕ್ಕಮಗಳೂರು	07
17. ಹಾಸನ	31
18. ಗುಲ್ಬರ್ಗ	09
19. ಬಳ್ಳಾರಿ	31
20. ರಾಯಚೂರು	03
21. ಬೀದರ್	29
ಒಟ್ಟು	512

ಅ) ಎಲ್ಲಾ ಷರತ್ತುಗಳನ್ನು ಪೂರೈಸಿದಲ್ಲಿ ಪರಿಶಿಷ್ಟ ಜಾತಿ: ಪಂಗಡದ ಆಡಳಿತ ಮಂಡಳಿಯವರು ಪ್ರೌಢಶಾಲೆಯನ್ನು ಪ್ರಾರಂಭಿಸಿದ ಮೊದಲ ವರ್ಷದಿಂದಲೇ ಅನುದಾನ ಪಡೆಯಲು ಅರ್ಹತೆ ಹೊಂದುವರು.

ಇ) ಪರಿಶಿಷ್ಟ ಜಾತಿ:ವರ್ಗಗಳ ಆಡಳಿತ ಮಂಡಳಿಯವರು ನಡೆಸುವ ಪ್ರೌಢಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಕೆಳಕಂಡ ಷರತ್ತುಗಳನ್ನು ಪೂರೈಸಿರಬೇಕು.

ಷರತ್ತುಗಳು:

1. ಆಡಳಿತ ಮಂಡಳಿಯು ಎಲ್ಲಾ ಸದಸ್ಯರು (ಶೇಕಡಾ 100) ಪರಿಶಿಷ್ಟ ಜಾತಿ:ವರ್ಗಕ್ಕೆ ಸೇರಿದವರಾಗಿರಬೇಕು.
2. ಪ್ರೌಢಶಾಲೆಯ ಸಿಬ್ಬಂದಿಯಲ್ಲಿ ಶೇಕಡ 50ರಷ್ಟು ಪರಿಶಿಷ್ಟ ಜಾತಿ : ಪಂಗಡಕ್ಕೆ ಸೇರಿದ ನೌಕರರು ಇರಬೇಕು.
3. ಪ್ರೌಢಶಾಲೆಯಲ್ಲಿ ಶೇಕಡ 50ರಷ್ಟು ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ : ಪಂಗಡಕ್ಕೆ ಸೇರಿದವರಾಗಿರಬೇಕು.
4. ಅನುದಾನ ಸಂಹಿತೆ ನಿಯಮ 9 ಮತ್ತು 16ರಲ್ಲಿ ವಿಧಿಸಲಾದ ಎಲ್ಲಾ ಅಂಶಗಳನ್ನು ಪಾಲನೆ ಮಾಡಿರಬೇಕು.
5. ಸ್ಥಿರ ನಿಧಿ ಹಣ ಠೇವಣಿ ಮೊದಲ ಕಂತಿನ ಹಣ ರೂ. 2,000-00 ಕಟ್ಟಿರಬೇಕು.
6. ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಗ್ರಂಥ ಭಂಡಾರ, ಆಟದ ಮೈದಾನ, ನಾಗರೀಕ ಸೌಲಭ್ಯ ಇವುಗಳನ್ನು ಒದಗಿಸಿರಬೇಕು

7. ಸಂಸ್ಥೆ ನೊಂದಾವಣೆ ಆಗಿರಬೇಕು.
8. ಪ್ರಥಮ ಮಾನ್ಯತೆ ಪಡೆದಿರಬೇಕು.
9. ಸಂಸ್ಥೆಯ ಲೆಕ್ಕಪತ್ರಗಳನ್ನು ಇಲಾಖೆಯಿಂದ ಮಾನ್ಯತೆ ಪಡೆದ ಆಡಿಟರ್‌ನಿಂದ ಆಡಿಟ್ ಮಾಡಿಸಿರಬೇಕು.

ಈ) ಹೌದು. ಮೇಲ್ಕಂಡ ಷರತ್ತುಗಳನ್ನು ಪಾಲಿಸದ ಶಾಲೆಗಳಿಗೆ ಅನುದಾನ ನೀಡಲಾಗುತ್ತಿಲ್ಲ.

ಉ) ಅನುದಾನಕ್ಕೆ ಅನರ್ಹ ಮಾಡಲು ಉಪನಿರ್ದೇಶಕರು ಶಿಫಾರಸ್ಸು ಮಾಡಿರುವ ಪ್ರಕರಣಗಳು ಯಾವುವು ಇರುವುದಿಲ್ಲ.

ಊ) ಹಿಂದುಳಿದ ವರ್ಗಗಳು ಪ್ರೌಢಶಾಲೆಗಳನ್ನು ಪ್ರಾರಂಭಿಸಿದ 3 ವರ್ಷಗಳ ನಂತರ ಅನುದಾನಕ್ಕೆ ಒಳಪಡಿಸಲು ಅವಕಾಶ ಮಾಡಿ ಸರ್ಕಾರದ ಆದೇಶ ಸಂಖ್ಯೆ ಇಡಿ 148 ಎಸ್‌ಒಹೆಚ್ 85 (2) ದಿನಾಂಕ 4-6-1987ರಲ್ಲಿ ಅವಕಾಶ ಮಾಡಲಾಗಿದೆ. ಸದರಿ ಆದೇಶ ದಿನಾಂಕ 4-6-87ರಿಂದಲೇ ಜಾರಿಗೆ ಬಂದಿದೆ. ಅದರಂತೆ ಹಿಂದುಳಿದ ವರ್ಗಗಳ ಪ್ರೌಢಶಾಲೆ ಎಂದು ಘೋಷಿಸಿರುವ ಶಾಲೆಗಳನ್ನು 3 ವರ್ಷದ ನಂತರ ಅನುದಾನಕ್ಕೆ ಒಳಪಡಿಸಲು ಈಗಲೂ ಅವಕಾಶವಿದೆ.

ದಾವಣಗೆರೆಯಲ್ಲಿ ಮಹಾವಿದ್ಯಾಲಯ ಪ್ರಾರಂಭಿಸುವುದು.

ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗೆರೆಯಲ್ಲಿ ಸರ್ಕಾರಿ ಪದವಿ ಮಹಾವಿದ್ಯಾಲಯ ಪ್ರಾರಂಭಿಸಬೇಕೆಂದು ಮನವಿಗಳೇನಾದರೂ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಮಹಾವಿದ್ಯಾಲಯವನ್ನು ತೆರೆಯಲು ಸರ್ಕಾರದವರು ಕೈಗೊಂಡ ಕ್ರಮಗಳೇನು ಹಾಗೂ ಯಾವಾಗ ಪ್ರಾರಂಭಿಸಲಾಗುವುದು?

ಇ) ರಾಜ್ಯದಲ್ಲಿ ಇರುವ ಇಂಜಿನಿಯರಿಂಗ್ ಮಹಾವಿದ್ಯಾಲಯಗಳ ಸಂಖ್ಯೆ ಹಾಗೂ ಅವುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ರಾಜ್ಯದ ಹಾಗೂ ಹೊರರಾಜ್ಯ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? (ಮಹಾವಿದ್ಯಾಲಯಗಳ . ಹೆಸರು, ಸ್ಥಳ ಸಂಪೂರ್ಣ ವಿವರ ಒದಗಿಸುವುದು)

ಈ) ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಟ್ಟದಲ್ಲಿ ಪ್ರವೇಶಾವಕಾಶ ನೀಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಅದನ್ನು ತಡೆಗಟ್ಟಿ ರಾಜ್ಯದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) 1986ನೇ ಸಾಲಿನಲ್ಲಿ ಬಂದಿತ್ತು.

ಆ) ಆರ್ಥಿಕ ಮುಗ್ಗಟ್ಟಿನಿಂದ ಈ ಪ್ರಸ್ತಾಪವನ್ನು ಪರಿಗಣಿಸಲಾಗಲಿಲ್ಲ ಮತ್ತು ಈ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿತ್ತು.

ಇ) ಒಟ್ಟು ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ : 51

ರಾಜ್ಯದ ವಿದ್ಯಾರ್ಥಿಗಳ ಸಂಖ್ಯೆ: 9373

ಹೊರರಾಜ್ಯದ ವಿದ್ಯಾರ್ಥಿಗಳ ಸಂಖ್ಯೆ: 7560

ಕಾಲೇಜುಗಳ ವಿವರಗಳನ್ನು ಇದಕ್ಕೆ ಹೊಂದಿಸಿರುವ ಪಟ್ಟಿಯಲ್ಲಿ ನೀಡಲಾಗಿದೆ.

ಈ) ಬಂದಿದೆ. ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿ ಕೋಟಾಪ್ರವೇಶ ಸ್ಥಾನಗಳಲ್ಲಿ ಶೇಕಡ 50ರಷ್ಟು ಸ್ಥಾನಗಳನ್ನು ಕರ್ನಾಟಕದ ವಿದ್ಯಾರ್ಥಿಗಳಿಗೆ ಮೀಸಲಾಗಿಡಲು ಸರ್ಕಾರ ಆದೇಶಿಸಿದೆ.